**CW : 9**
PW : 6

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1100/2023

ಸಾಕ್ಷಿದಾರರ ಹೆಸರು : ಅಬ್ದುಲ ಜಲೀಲ್
ತಂದೆಯ ಹೆಸರು : ಉಮರ
ಪ್ರಾಯ : 37 ವರ್ಷ
ಉದ್ಯೋಗ ಚಾಲಕ
ವಾಸಸ್ಥಳ : ಕಟ್ಟೆತ್ತಾರು ಮನೆ, ಕೆದಂಬಾಡಿ
ದಿನಾಂಕಃ **02.04.2026**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ ನಿಪಿ.3 ಮತ್ತು 4 ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಗಳನ್ನು ಗುರುತಿಸಿದ್ದು ನಿಪಿ.3 ಮತು 4 ರಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ.3ಸಿ ಹಾಗೂ 4ಸಿ ಎಂದು ಗುರುತಿಸಲಾಯಿತು. ನಿಪಿ.3 ಮತ್ತು 4 ಕ್ಕೆ ನಾನು ದಿ.24.03.2023 ರಂದು ಕೆಯ್ಯೂರು ಶಾಲೆಯ ಮುಂಭಾಗದಲ್ಲಿ ಅಪಘಾತವಾಗಿದ್ದ ರಸ್ತೆಯ ಬದಿಯ ಮಣ್ಣು ರಸ್ತೆಯಲ್ಲಿ ಸಹಿ ಮಾಡಿದ್ದೇನೆ. ಸ್ಥಳಕ್ಕೆ ಪೊ. ಇನ್ಸಪೆಕ್ಟರ ಮಹಜರ ಮಾಡಲು ಬಂದಿದ್ದರು. ಪೋಲಿಸರು ವಿಡಿಯೋ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಮಹಜರ ಮಾಡುವ ಕಾಲದಲ್ಲಿ ಪೋಲಿಸರನ್ನು ಹೊರತುಪಡಿಸಿ ಬೇರೆ ವ್ಯಕ್ತಿ ಇದ್ದರು ಅವರ ಹೆಸರು ನೆನಪಿಲ್ಲ. ಸ್ಥಳದಲ್ಲಿ ಕೆಎ19ಎಂಜಿ ನೊಂದಣಿ ಸಂಖ್ಯೆಯ ಸಿಲ್ವರ ಬಣ್ಣದ ಇಕೋ ಕಾರು ಇತ್ತು ಅದನ್ನು ಪೋಲಿಸರು ತಮ್ಮ ವಶ ಪಡೆದರು. ಪೋಲಿಸರು ತಮ್ಮ ವಶ ಪಡೆದ ವ ಾಹನವನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಯು ನಿಪಿ1ರಲ್ಲಿ ಕಾಣುವ ವಾಹನವನ್ನು ನೋಡಿ ಅದನ್ನೇ ಪೋಲಿಸರು ತಮ್ಮ ವಶ ಪಡೆದಿದ್ದರು ಎಂದು ನುಡಿದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಃ ಅನುಮತಿ ನೀಡಲಾಯಿತು)

<u>ಪಾಟಿ ಸವಾಲು ಮಾನ್ಯ ಸ ಸ ಅ ಅವರಿಂದ ಃ</u>

ದಿ.24.09.2023 ರಂದು ನಾನು ನಿಪಿ3 ಮತ್ತು 4 ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದರೆ ತಿಂಗಳು ಅಷ್ಟಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ನನ್ನ ಮಗಳನ್ನು ಶಾಲೆಯಿಂದ ಕರೆದುಕೊಂಡು ಬರುವಾಗ ಅಪಘಾತದ ವಿಚಾರ ಗೊತ್ತಾಗಿದೆ. ನಾನು ಸಂ 4.15 ರಿಂದ 4.30 ರಸಮಯದಲ್ಲಿ ನನ್ನ ಮಗಳನ್ನು ಶಾಲೆಯಿಂದ ಕರೆದುಕೊಂಡು ಬರಲು ಹೋಗಿದ್ದೇನೆ. ಮಹಜರಗೆ ನನ್ನನ್ನು ಯಾರು ಕರೆದಿಲ್ಲ ನಾನೇ ಸ್ಥಳಕ್ಕೆ ಹೋಗಿದ್ದೆ. ಮಗಳನು ಶಾಲೆಗೆ ಬಿಡಲು ಎಷ್ಟು ಗಂಟೆಗೆ ಹೋಗಿದ್ದನು ಎಂದರೆ ನೆನಪಿಲ್ಲ. ಮಹಜರಿಗೆ ನಾನು ಮಧ್ಯಾಹ್ನದ ಮೇಲೆ ಸಹಿ ಮಾಡಿದ್ದೇನೆ. ಮಹಜರ ಕಾಲದಲ್ಲಿ ನಾನು 2 ದಾಖಲೆಗಳಿಗೆ ಸಹಿ ಮಾಡಿದ್ದೇನೆ. ಶಾಲೆಯ ಮುಂಭಾಗ ಮುಖ್ಯ ರಸ್ತೆಯ ಪಕ್ಕ ಅಪಘಾತ ಆಗಿದೆ. ನನಗೆ ಅಪಘಾತ ಸ್ಥಳದ ಪರಿಚಯ ಮೊದಲೇ ಇದೆ. ಅಪಘಾತ ಸ್ಥಳದಿಂದ ಸುಮಾರು 5 ಅಡಿ ದೂರದಲ್ಲಿ ಭರತರವರ ಅಂಗಡಿ ಇದೆ. ನಿಪಿ4ರಲ್ಲಿ ಭರತ ರವರ ಅಂಗಡಿ ಮತ್ತು ಶಾಲೆ ಇರುವ ಬಗ್ಗೆ ಕಾಣುವುದಿಲ್ಲ ಎಂದರೆ ಸರಿ.

ನನಗೆ ಚಾಸಾ1ರವರ ಪರಿಚಯ ಇದೆ. ನನಗೆ ಚಾಸಾ10ರವರ ಪರಿಚಯ ಇಲ್ಲ. ಪೋಲಿಸರಲ್ಲದೇ ಸ್ಥಳದಲ್ಲಿ ಸುಮಾರು 5-6 ಜನ ಇದ್ದರು. ಪೋಲಿಸರು ಸ್ಥಳದಲ್ಲಿ ಸುಮಾರು ಅರ್ಧ ಗಂಟೆ ಕಾಲ ಇದ್ದರು. ಮಹಜರ ಕಾಲದಲ್ಲಿ ಹಾಜರಿರಬೇಕೆಂದು ಪೋಲಿಸರು ನಮಗೆ ಲಿಖಿತ ನೋಟಿಸ ಕೊಟ್ಟಿಲ್ಲ. ನನ್ನ ಮುಖ್ಯ ವಿಚಾಣೆಯಲ್ಲಿ ತಿಳಿಸಿದ ದಿನಾಂಕದಂದು ನಾನು ಅಪಘಾತ ಸ್ಥಳಕ್ಕೆ ಹೋಗಿಯೇ ಇಲ್ಲ ಮತ್ತು ಸ್ಥಳದಲ್ಲಿ ಪೋಲಿಸರು ಯಾವುದೇ ಮಹಜರ ಕೂಡಾ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ3 ಮತು 4 ದಾಖಲೆಗಳಿಗೆ ನನ್ನ ಪೊ. ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸುಳ್ಳು. ನನ್ನ ಮಹಜರ ಕಾಲದಲ್ಲಿ ಸ್ಥಳದಲ್ಲಿ ಹಾಜರಿಲ್ಲದಿದ್ದ ಕಾರಣ ನನಗೆ ಮಹಜರ ಕಾಲದಲ್ಲಿ ಹಾಜರಿದ್ದ ವ್ಯಕ್ತಿಗಳ ಹೆಸರು ಹೇಳಲು ಆಗುವುದಿಲ್ಲ. ಚಾಸಾ1ರವರು ನನಗೆ ಪರಿಚಯರಸ್ಥರಾದ ಕಾರಣ ಅವರಿಗೆ ಅನುಕೂಲವಾಗಿಲಿ ಎಂದು ಸುಳ್ಳು ಸಾಕ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 9**
PW : 6